**ದಿನಾಂಕಃ 30-01-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು ವಾದಿಯ ಪರ ಶ್ರೀ ಎನ್ ವಿ ಸಿ ವಕೀಲರಿಂದಃ**

ಸಾಕ್ಷಿ ನುಡಿಯಲು ಬರುವಂತೆ ನ್ಯಾಯಾಲಯದಿಂದ ನನಗೆ ಯಾವುದೇ ಸಮನ್ಸ ಬಂದಿರುವುದಿಲ್ಲ. ಸಾಕ್ಷಿ ನುಡಿಯಲು ನನಗೆ 4 ನೇ ಪ್ರತಿವಾದಿ ಹೇಳುತ್ತಾತೆ ಎಂದರೆ ಸಾಕ್ಷಿ ಧಾರವಾಡದಲ್ಲಿ ಮನೆಗೆ ಸಂಬಂಧಿಸಿದ ವ್ಯವಹಾರ ನಿಮಗೆ ಗೊತ್ತಿದೆ ಆದ್ದರಿಂದ ನಮ್ಮ ವಕೀಲರಿಗೆ ಅದರ ಬಗ್ಗೆ ಮಾಹಿತಿ ನೀಡಿ, ಕೋರ್ಟನಲ್ಲಿ ಸಾಕ್ಷಿ ಹೇಳಬೇಕು ಅಂತಾ ಹೇಳಿದ್ದರ ಮೇರೆಗೆ ನಾನು ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಈ ಪ್ರಕರಣವನ್ನ 4 ನೇ ಪ್ರತಿವಾದಿಯ ತಂಗಿ ಆಸ್ತಿ ವಿಷಯವಾಗಿ ದಾಖಲಿಸಿರುತ್ತಾಳೆ. ನನಗೆ ವಾದಿಯ ಪರಿಚಯವಿಲ್ಲ. ನನಗೆ ಈ ಪ್ರಕರಣದಲ್ಲಿರುವ 4 ನೇ ಪ್ರತಿವಾದಿಯನ್ನು ಬಿಟ್ಟು ಉಳಿದ ಪ್ರತಿವಾದಿಯರ ಹಾಗೂ ವಾದಿಯ ಪರಿಚಯವಿರುವುಲ್ಲ.

ಧಾರವಾಡದಲ್ಲಿರುವ ಮನೆಯಲ್ಲಿ ನಾನು ಇರುತ್ತೇನೆ. ಮನೆ ನಂ.105 ಇರುತ್ತದೆ. ನಮ್ಮ ಮನೆ ನಂ.123. ನಮ್ಮ ಮನೆ ನನ್ನ ಹೆಸರಿನಲ್ಲಿ ಇದೆ ಮತ್ತು ಅದು ತೋಪೊವನ ನಗರದಲ್ಲಿದೆ. ಖರೀದಿಕ್ಕಿಂತ ಒಂದು ವಾರ ಮೊದಲು ಆಸ್ತಿಯ ಮಾತುಕತೆಯಾಗಿತ್ತು. ಧಾರವಾಡದಲ್ಲಿ ಆಸ್ತಿಯ ಮಾತುಕತೆಯಾಗಿತ್ತು. ಕೆಲವೊಂದು ಮಾತುಕತೆ ನಮ್ಮ ಮನೆಯಲ್ಲಿಯಾಗಿದ್ದು, ಪೈನಲ್ ಮಾತುಕತೆಯು ಹೊರಗಡೆಯಾಗಿತ್ತು. ಮೂಲತಃ ಆಸ್ತಿ ಕೋನರೆಡ್ಡಿಯವರ ಹೆಸರಿನಲ್ಲಿತ್ತು. ಮಾತುಕತೆಯ ಸಮಯದಲ್ಲಿ ನಾನು ಹಾಗೂ ಪ್ರಭು ಕೆಂಡದಮಟ್ಟ ಇದ್ದರು. ನಮ್ಮಿಬ್ಬರನ್ನು ಬಿಟ್ಟು ಬೇರೆ ಯಾರು ಇರಲಿಲ್ಲ. ಮಾತುಕತೆಯಾದ ದಿನ 20 ಸಾವಿರ ಹಣ ಕೊಟ್ಟಿರುತ್ತಾರೆ. 20 ಹಣ ಕೊಟ್ಟ ಬಗ್ಗೆ ಲೇಖಿಯಾಗಿರುವುದಿಲ್ಲ.

ಖರೀದಿಯ ಸಮಯಕ್ಕೆ 1, 5 ಮತ್ತು 6 ನೇ ಪ್ರತಿವಾದಿಯರು ಸಹಾ ಬಂದಿದ್ದರು ಎಂದರೆ ಸರಿಯಲ್ಲ. ಖರೀದಿಯಾದ ದಿನ ರೂ.7,80,000/- ಗಳನ್ನ ಕೊಟ್ಟಿರುತ್ತಾರೆ. ಮಾತುಕತೆಯ ದಿನ 20 ಸಾವಿರ ರೂಪಾಯಿಗಳನ್ನ ಕೊಟ್ಟಿದ್ದು, ಉಳಿದ ರೂ.7,80,000/- ಗಳನ್ನು ಈ ಕೊಡುತ್ತಿದ್ದೇವೆಂತಾ ಖರೀದಿ ಪತ್ರದಲ್ಲಿ ಬರೆದಿಲ್ಲ . ಖರೀದಿಯ ಹಣ 8 ಲಕ್ಷ ರೂಪಾಯಿಗಳನ್ನ 1, 5 ಮತ್ತು 6 ನೇ ಪ್ರತಿವಾದಿಯರೇ ಮಾಲೀಕರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 500 ಮುಖ ಬೆಲೆಯ ನೋಟುಗಳು ಒಟ್ಟು 8 ಲಕ್ಷಗಳನ್ನ 4 ನೇ ಪ್ರತಿವಾದಿ ಖರೀದಿದಾರರಿಗೆ ಕೊಟ್ಟಿರುತ್ತಾರೆ. ನಾನು ಮತ್ತು 4 ನೇ ಪ್ರತಿವಾದಿ ಬಹಳ ದಿನಗಳಿಂದ ಆತ್ಮೀಯ ಸ್ನೇಹಿತರು ಇರುತ್ತೇವೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ 1 ರಿಂದ 6 ನೇ ಪ್ರತಿವಾದಿಯರು ಬಂದಿರಲಿಲ್ಲ ಮತ್ತು ಅವರು ಯಾವುದೇ ಹಣ ಕೊಟ್ಟಿರುವುದಿಲ್ಲ, ಇದು ಅವರಿಗೆ ಸಂಬಂಧಪಡದ ಆಸ್ತಿಯಾಗಿರುತ್ತದೆ ಎಂದು ಬರೆಯಿಸಿದ್ದೇನೆ ಎಂದರೆ ಸಾಕ್ಷಿ ನಜರಚೂಕಿನಿಂದ ಆ ರೀತಿ ಬರೆದಿದ್ದು, ಆ ದಿನ 4 ನೇ ಪ್ರತಿವಾದಿ ಬಂದಿದ್ದು ಮತ್ತು ಅವರೊಬ್ಬರೇ ಖರೀದಿಯ ಸಂಪೂರ್ಣ ಹಣವನ್ನ ಭರಿಸಿರುತ್ತಾರೆ ಅಂತಾ ನುಡಿಯುತ್ತಾರೆ. ಆ ರೀತಿ ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ 1 ರಿಂದ 6 ನೇ ಪ್ರತಿವಾದಿಯರು ಯಾವುದೇ ರೀತಿ ಹಣಕಾಸಿನ ಸಹಾಯ ಮಾಡಿರುವುದಿಲ್ಲಂತಾ ಬರೆಯಿಸಿದ್ದೇನೆ ಎಂದರೆ ಸಾಕ್ಷಿ 4 ನೇ ಪ್ರತಿವಾದಿಯೇ ಹಣವನ್ನ ಭರಿಸಿದ್ದು, ನಜರಚೂಕಿನಿಂದ ಪ್ರಮಾಣಪತ್ರದಲ್ಲಿ ಬರೆದಿದ್ದಾರೆ ಎಂದು ನುಡಿಯುತ್ತಾರೆ. ಮುಖ್ಯ ವಿಚಾರಣೆ ಪ್ರಮಾಣಪತ್ರದ ಪ್ಯಾರಾ ನಂ5 ರಲ್ಲಿ ಅನುಸೂಚಿ ಬ ದಲ್ಲಿ ನಮೂದಿಸಿದ 6 ನೇ ಆಸ್ತಿಯ ವ್ಯವಹಾರದಲ್ಲಿ ವಾದಿ ಮತ್ತು 1 ರಿಂದ 6 ನೇ ಪ್ರತಿವಾದಿಯರು, 4 ನೇ ಪ್ರತಿವಾದಿಗೆ ಯಾವುದೇ ರೀತಿಯ ಹಣಕಾಸಿದ ಸಹಾಯ ನೀಡಿರುವುದಿಲ್ಲಂತಾ ಬರೆಸಿದ್ದೇನೆ ಎಂದರೆ ಸರಿ.

ಯಾವುದೇ ಕಾಗದಪತ್ರಕ್ಕೆ ಸಹಿ ಮಾಡುವುದಕ್ಕಿಂತ ಮೊದಲು ನಾನು ಅದನ್ನು ಓದು ನೋಡಿ ಸಹಿ ಮಾಡುತ್ತೇನೆ. ಮುಖ್ಯ ಪ್ರಮಾಣಪತ್ರವನ್ನ ನಾನು ಓದು ನೋಡಿ ಸಹಿ ಮಾಡಿರುತ್ತೇನೆ . ಖರೀದಿ ವ್ಯವಹಾರವನ್ನ ಕೇವಲ 4 ನೇ ಪ್ರತಿವಾದಿ ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿಯ ಹಣ 8 ಲಕ್ಷವನ್ನು 4 ನೇ ಪ್ರತಿವಾದಿ ಒಬ್ಬನೇ ತನ್ನ ಸ್ವಂತ ದುಡಿಮೆಯಿಂದ ಕೊಟ್ಟಿರುತ್ತಾನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಹುಬ್ಬಳ್ಳಿಯ ಸ್ಟೇಟ್ ಬ್ಯಾಂಕಿನಲ್ಲಿ ಸಾಲ ಮಾಡಿ, ಖರೀದಿ ವ್ಯವಹಾರ ಮಾಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖಾಲಿ ನಿವೇಶನದಲ್ಲಿ ಮನೆ ಕಟ್ಟಲು 4 ನೇ ಪ್ರತಿವಾದಿ 30 ಲಕ್ಷ ಖರ್ಚು ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆ ಕಟ್ಟಲು ಪ್ರತಿವಾದಿ ನಂ.1, 5 ಮತ್ತು 6 ಹಾಗೂ ವಾದಿಯು ಸಹಾ ಹಣಕಾಸಿನ ಸಹಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹಣಕಾಸಿನ ಸಹಾಯ ಮಾಡಿದ ವಿಷಯ ನನಗೆ ಗೊತ್ತಿದ್ದರೂ ಸಹಾ 4 ನೇ ಪ್ರತಿವಾದಿಗೆ ಸಹಾಯ ಮಾಡಲೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ವಕೀಲರ ಕೋರಿಕೆಯ ಮೇರೆಗೆಪಾಟೀ ಸವಾಲುಃ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.